


International Journal of Kannada Research
www.kannadajournal.com

ISSN: 2454–5813
IJSR 2016; 2(3): 139-141
© 2016 IJKS
www.kannadajournal.com
Received: 13-05-2016
Accepted: 14-06-2016

**ಮಂಜುನಾಥ .ಎಂ**
ಸಂಶೋಧಕ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾನಿಲಯ
ವಿದ್ಯರಣ್ಯ ಹಂಪಿ

**Correspondence**
**ಮಂಜುನಾಥ .ಎಂ**
ಸಂಶೋಧಕ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾನಿಲಯ
ವಿದ್ಯರಣ್ಯ ಹಂಪಿ

# ಯಳಂದೂರು ತಾಲೂಕು ಪರಿಸರದ ಶಾಸನ ಲಿಪಿಕಾರರು

**ಮಂಜುನಾಥ .ಎಂ**

ಕ್ರಿ.ಶ.೩ನೆಯ ಶತಮಾನದಲ್ಲಿ ಆಶೋಕ ಚಕ್ರವರ್ತಿಯು ಗಾಂಧಾರ ಪ್ರದೇಶದ ಚಪಡನೆಂಬ ಲಿಪಿಕಾರನನ್ನು ರಾಜ್ಯದ ದಕ್ಷಿಣದ ಗಡಿಗೆ ಕಳುಹಿಸಿ ತನ್ನ ಸಾಮಾಜಿಕ ಸಂದೇಶವನ್ನು ಬ್ರಾಹ್ಮಿಲಿಪಿ, ಪ್ರಾಕೃತ ಭಾಷೆಯಲ್ಲಿ ಬಂಡೆಗಲ್ಲುಗಳ ಮೇಲೆ ಕೊರೆಯಿಸಿದನು. ಚಿತ್ರದುರ್ಗ ಜಿಲ್ಲೆಯ ಬ್ರಮ್ಹಗಿರಿ, ಸಿದ್ದಾಪುರ, ಜಟಿಂಗ ರಾಮೇಶ್ವರದಲ್ಲಿ ಅಶೋಕನ ಕಿರು ಸಂದೇಶವನ್ನು ಕಂಡರಿಸಿ ಕೊನೆಯಲ್ಲಿ ಲಿಪಿಕರೇಣ ಎಂದು ಖರೋಷ್ಠಿ ಲಿಪಿಯಲ್ಲಿ ಬರೆದನು. ಈ ಕಾಲದಲ್ಲಿ ಶಾಸನಗಳನ್ನು ಬರೆಯುವವರನ್ನು ಲಿಪಿಕಾರನೆಂದು, ಲಿಪಿಸುವ ಕ್ರಿಯೆಯನ್ನು ಲಿಪಿಕರೇಣ ಎಂದು ಕರೆಯಲಾಗುತ್ತಿತ್ತು. ಕವಿಗಳು ಶಾಸನದ ನಕಲು ಪ್ರತಿಗಳನ್ನು ತಯಾರಿಸಿಕೊಟ್ಟರೆ ಲಿಪಿಕಾರ ಲೋಹ, ಶಿಲೆಗಳ ಮೇಲೆ ಕೊರೆದು ಅವುಗಳಿಗೆ ಶಾಶ್ವತತೆಯನ್ನು ದೊರಕಿಸಿಕೊಟ್ಟಿದ್ದಾರೆ. ಶಾಸನಗಳನ್ನು ಕೊರೆಯಿಸುವ ಲಿಪಿಕಾರರ ಇತಿಹಾಸವು ಚಪಡನಿಂದ ಆರಂಭವಾಗಿ ಮುಂದೆ ಶಾತವಾಹನರು, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟರ ಕಾಲದಲ್ಲಿ ಹಲವಾರು ಶಾಸನ ಶಿಲ್ಪಿಗಳು, ಲಿಪಿಕಾರರು ತಮ್ಮ ಹೆಸರನ್ನು ಬಿಟ್ಟು ಹೋಗಿದ್ದಾರೆ.

ಶಾಸನ ಶಿಲ್ಪಿಗಳನ್ನು ಶಾಸನದ ಪರಿಭಾಷೆಯಲ್ಲಿ ಶಿಲ್ಪಿ, ಸೂತ್ರಧಾರ, ರೂವಾರಿ, ವಿಶ್ವಕರ್ಮ, ಅಕ್ಕಸಾಲಿ, ಸರಸ್ವತಿ ಗಣಪುತ್ರ, ಸರಸ್ವತಿ ಗಣದಾಸರೆಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು. ಲಿಪಿಕಾರರು ತಮ್ಮದೇಯಾದ ಲೇಖನ ವಿಧಾನಗಳನ್ನು, ವಿನ್ಯಾಸಗಳನ್ನು ರೂಪಿಸಿಕೊಂಡು ಅವುಗಳನ್ನು ಶಿಲೆ, ಲೋಹಗಳ ಮೇಲೆ ಕೆತ್ತುತ್ತಿದ್ದರು. ಗಂಗ ಚೋಳ, ಹೊಯ್ಸಳ, ವಿಜಯನಗರ, ಮೈಸೂರು ಒಡೆಯರ ಅಳ್ವಿಕೆಯ ಕಾಲದಲ್ಲಿ ಶಾಸನಗಳಲ್ಲಿ ಅಕ್ಷರಗಳನ್ನು ಸುಂದರವಾಗಿ, ಅಲಂಕಾರಯುತವಾಗಿ ಬರೆದಿರುವುದನ್ನು, ಲಿಪಿಕಾರರನ್ನು ಯಳಂದೂರು ತಾಲೂಕು ಪರಿಸರದಲ್ಲಿ ಗುರುತಿಸಿಬಹುದಾಗಿದೆ.

ತ್ವಷ್ಟರು ಮರಗೆಲಸ, ಕಂಚುಗಾರಿಕೆಯನ್ನು ವೃತ್ತಿಯನ್ನಾಗಿಸಿಕೊಂಡು ಹಲವು ಶಾಸನಗಳನ್ನು ಬರೆದು ತಮ್ಮ ಹೆಸರನ್ನು ನಮೂದಿಸಿದ್ದಾರೆ. ಸಂಸ್ಕೃತ, ಕನ್ನಡ, ತಮಿಳು, ಬಾಷೆಯನ್ನು ರೂಡಿಸಿಕೊಂಡಿದ್ದು, ಕನ್ನಡ, ತಮಿಳು ಲಿಪಿಯಲ್ಲಿ ಪ್ರೌಢಿಮೆ ಸಾಧಿಸಿ ಹಲವು ತಾಮ್ರಪಟಗಳು, ಶಿಲೆಗಳ ಮೇಲೆ ತಮ್ಮ ಅಕ್ಷರವನ್ನು ಮೂಡಿಸಿ ತಟ್ಟಾಕರೇಣ, ತ್ವಷ್ಟಕರೇಣ ಎಂಬ ಪದಗಳಿಂದ ಗುರುತಿಸಿಕೊಂಡಿದ್ದಾರೆ. ಗುಂಡ್ಲುಪೇಟೆ ತಾಲ್ಲೂಕಿನ ಕೆಲಸೂರಿನ ಜೈನ ಬಸದಿಯಲ್ಲಿರುವ ೧೦ ಸಾಲುಗಳ ಶಿಲಾಶಾಸನವನ್ನು ತಟ್ಟಾನ್ ರಾಜಾಚಾರಿಯ ಮಗ ಮಾಣಕ್ಯಾಚಾರಿಯು ಬರೆದಿದ್ದಾನೆ.[೧] ಈ ಶಾಸನ ತಮಿಳು ಬಾಷೆ, ಲಿಪಿಯಲ್ಲಿದ್ದು ೧೨ನೇ ಶತಮಾನಕ್ಕೆ ಸೇರಿದೆ. ಮಾಣಿಕ್ಯಚಾರಿಯು ತಮಿಳು ಭಾಷೆ, ಲಿಪಿಯ ಮೇಲೆ ಪ್ರಭುತ್ವವನ್ನು ಹೊಂದಿರಿವ ಸ್ಥಳೀಯ ಲಿಪಿಕಾರನಿರಬಹುದು. ತ್ರಿಯಾಂಬಕಪುರದ ತ್ರಿಯಾಂಬಕೇಶ್ವರ ದೇವಾಲಯದಲ್ಲಿ ೧೬ನೇ ಶತಮಾನದ ತಾಮ್ರ ಶಾಸನವನ್ನು ತ್ವಷ್ಟಾ ಶ್ರೀ ವೀರಣಾಚಾರ್ಯರು ವ್ಯಲಿಖಿಸಿದ್ದಾನೆ.[೨] ಮೂರು ತಾಮ್ರದ ಹಲಗೆಗಳು, ೧೧೪ ಸಾಲುಗಳನ್ನು ಹೊಂದಿರುವ ಈ ಶಾಸನ ಸಂಸ್ಕೃತ, ಕನ್ನಡ ಬಾಷೆಯಲ್ಲಿದೆ. ತನ್ನನ್ನು ಮಲ್ಲಣಾತ್ಮಜನೆಂದು ಹೇಳಿಕೊಂಡಿದ್ದಾನೆ. ಶ್ರೀಕೃಷ್ಣದೇವರಾಯನ ಸಭಾಪತಿ ಶಾಸನದ ಸ್ವರೂಪವನ್ನು ರಚಿಸಿದ್ದಾನೆ. ಆದರೆ ಸಭಾಪತಿಯ ಹೆಸರಿನ ಉಲ್ಲೇಖವಿಲ್ಲ. ಇದೇ ಹೆಸರಿನ ಲಿಪಿಕಾರ ತಿರುಮಲಾರ್ಯನ ಸಭಾಪತಿಯಾಗಿದ್ದು ನಂಜನಗೂಡಿನ ರಾಘವೇಂದ್ರ ಮಠದಲ್ಲಿರುವ ೯೫ ಸಾಲುಗಳ ತಾಮ್ರ ಶಾಸನವನ್ನು ಕಂಡರಿಸಿದ್ದಾನೆ. ವೀರಣ್ಣನೆಂಬುವವನು ಈತನ ತಂದೆಯಾಗಿದ್ದನು.

ತ್ವಷ್ಟರಂತೆ ಶಾಸನವನ್ನು ಬರೆದವರಲ್ಲಿ ವಿಶ್ವಕರ್ಮರ ಹೆಸರುಗಳು ನಮ್ಮ ತಾಲೂಕು ಪರಿಸರದಲ್ಲಿ ಕಾಣಸಿಗುತ್ತದೆ. ತೆಳ್ಳನೂರಿನ ೧೮ ಸಾಲುಗಳ ಶಿಲಾಶಾಸನವನ್ನು ವಿಶ್ವಕರ್ಮ ಕೊಂಗುಣಿಯರ ಮಾಯಣಚಾರಿಯ ಮಗ ಕೇತಚಾರಿಯು ಕಂಡರಿಸಿದ್ದಾನೆ.[೩] ಕ್ರಿ.ಶ. ೧೧೬೯ ಕ್ಕೆ ಸೇರಿದ ಈ ಶಾಸನ ಹೊಯ್ಸಳ ದೊರೆ ೧ನೇ ನರಸಿಂಹನ ಕಾಲದ್ದು. ಕೇತಚಾರಿಯ ತಂದೆ ಗಂಗ ಸಾಮ್ರಾಟ ಸ್ಥಾಪಕನ

ಹೆಸರನ್ನು ತನ್ನ ಹೆಸರಿನ್ನೊಂದಿಗೆ ಸೇರಿಸಿಕೊಂಡು ಕೊಂಗುಣಿಯರ ಮಾಯಣಾಚಾರಿಯಂದು ಕರೆದುಕೊಂಡಿದ್ದಾನೆ. ಈ ಮನೆತನದವರು ಗಂಗರಾಜರ ಆಳ್ವಿಕೆಯ ಕಾಲದಿಂದಲೂ ಶಾಸನವನ್ನು ಕಂಡರಿಸುವ ಕೆಲಸವನ್ನು ನಿರ್ವಹಿಸುತ್ತಾ ಬಂದಿರುವುದು ಕೊಂಗುಣಿ ಹೆಸರಿನಿಂದ ಗುರುತಿಸಬಹುದು. ಆದರೆ ಈತನು ತನ್ನ ಈ ಕಾರ್ಯಕ್ಕೆ ಪಡೆದುಕೊಂಡಿರುವ ದತ್ತಿಯ ವಿವರಗಳು ಶಾಸನದಲ್ಲಿ ಇಲ್ಲ. ಎಲಕ್ಕೂರಿನ ೧೬ ಸಾಲುಗಳ ಶಿಲಾಶಾಸನವನ್ನು ಶ್ರೀಮತ್ ಇಮ್ಮಡಿ ಪೆರ್ಮಾಡಿಚಾರ್ಯರ ಮಗ ಬರ್ದ್ದಮಯ್ಯನು ಬರೆದಿದ್ದಾನೆ.[೪] ಪೆರ್ಮಾಡಿ ಗಂಗ ದೊರೆಗಳು ಪಾಂಡ್ಯರನ್ನು ಸೋಲಿಸಿದ ಜ್ಞಾಪಕಾರ್ಥ ಹೊಂದಿದ್ದ ಬಿರುದ್ದಾಗಿತ್ತು. ಈ ಶಾಸನ ಕಿ.ಶ. ೯೭೧ – ೭೫ರ ಕಾಲಕ್ಕೆ ಸೇರಿದೆ. ಗಂಗ ದೊರೆ ಎರೆಯಂಗನ ಕಾಲದಲ್ಲಿ ವಿಶ್ವಕರ್ಮ ಹೆಸರಿನ ಲಿಪಿಕಾರನು ಕೆರೆಹಳ್ಳಿಯ ೯೪ ಸಾಲುಗಳ ತಾಮ್ರ ಶಾಸನವನ್ನು ಕಂಡರಿಸಿದ್ದಾನೆ.[೫] ಶಾಸನದ ಕೊನೆಯಲ್ಲಿ "ಚಿತ್ರ ವಿನ್ಯಾಸ ವಿಶ್ವಕರ್ಮ ಶಾಸನಂ ಲಿಖಿತಂ" ತನ್ನ ಹೆಸರನ್ನು ನಮೂದಿಸಿದ್ದಾನೆ. ಈ ಶಾಸನ ಸ್ರಗ್ದರೆ, ಶಾರ್ದೂಲ, ವಿಕ್ರೀಡಿತ, ಉತ್ಪಲಮಾಲೆ, ವಸಂತ ತಿಲಕ ಛಂದಸ್ಸಿನಲ್ಲಿದೆ. ಕ್ರಿ.ಶ. ೧೧ನೇ ಶತಮಾನದ ಕುಲೊತ್ತುಂಗನ ಪ್ರಶಸ್ತಿ ಶಾಸನ ಅದರ ಗ್ರಾಮದಲ್ಲಿದ್ದು ೯ ಸಾಲುಗಳನ್ನು ಹೊಂದಿದೆ. ಈ ಶಾಸನವನ್ನು ತಟ್ಟಾನ್ ಸಿಜ್ಜಲಾನ್ತಕ ನೆಂಬವವನು ಬರೆದಿದ್ದಾನೆ.[೬]

ಶಾಸನವನ್ನು ಬರೆಯುತ್ತಿದ್ದ ಕೆಲವು ಲಿಪಿಕಾರರು ತಮ್ಮನ್ನು ಆಚಾರ್ಯರೆಂದು ಗುರುತಿಸಿಕೊಂಡಿದ್ದಾರೆ. ಆಚಾರ್ಯ ಎಂದರೆ ಗುರು, ಶ್ರೇಷ್ಠ, ಜ್ಞಾನಿ, ಎಂಬ ಅರ್ಥಗಳಿವೆ. ತಾವು ಕುಸುರಿಕೆಲಸದವರು ಮಾತ್ರವಲ್ಲ ಅಕ್ಷರಸ್ತರು ಕೂಡ ಎಂಬುದನ್ನು ತೋರಿಸಿಕೊಂಡು ಸಾಮಾಜಿಕ ಸ್ಥಾನ ಮಾನವನ್ನು ಕಾಪಾಡಿಕೊಳ್ಳೂವುದು ಅವರ ಉದ್ದೇಶವಾಗಿತ್ತೇಂದು ಎಸ್.ಶೆಟ್ಟರ್ ಅಭಿಪ್ರಾಯಪಡುತ್ತಾರೆ.[೭] ಶಾಸನ ಬರೆಯುವ ಕಾರ್ಯವನ್ನು ವಿಶ್ವಕರ್ಮದಂತೆ ಬೇರೆ ವರ್ಗದವರು ನಿರ್ವಹಿಸುತ್ತಿದ್ದರು. ಆದರೆ ವಿಶ್ವಕರ್ಮಿಯರು ಇವರೆಲ್ಲಾರಿಗಿಂತಲೂ ತಾವು ಶ್ರೇಷ್ಠರು ಎಂಬುವುದನ್ನು ತೋರಿಸಿಕೊಳ್ಳಲು ತಮ್ಮ ಹೆಸರಿನ ಜೋತೆ ಆಚಾರ್ಯರೆಂಬ ವಿಶೇಷಣವನ್ನು ಸೇರಿಸಿಕೊಳ್ಳುತ್ತಿದ್ದ ಸಾಧ್ಯತೆಯು ಇದೆ. ಗಂಗರಿಂದ ಮೈಸೂರಿನ ಒಡೆಯರವರೆಗೆ ಒಂದು ಸಹಸ್ರಮಾನಕಾಲ ಶಾಸನವನ್ನು ಕಂಡರಿಸುವ ಕೆಲಸವನ್ನು ವಿಶ್ವಕರ್ಮ ಆಚಾರಿಗಳು ನಿರ್ವಹಿಸುತ್ತಾ ಬಂದಿದ್ದಾರೆ. ಇದಕ್ಕೆ ಪ್ರತಿಫಲವಾಗಿ ಅರಸರಿಂದ ಭೂಮಿ, ಇತರ ಕಾಣಿಕೆಗಳನ್ನು ಪಡೆದುಕೊಂಡಿದ್ದಾರೆ. ಬಾಗುಳಿಯ ೨೪ ಸಾಲುಗಳ ಶಿಲಾಶಾಸನವನ್ನು ನಿರ್ಗುಂದ ನಾಡಿನ ಶಿಲ್ಪಿ ವಟ್ಟಚಾರಿ ಕಂಡರಿಸಿದ್ದಾನೆ.[೮] ೩ನೆಯ ವೀರಬಲ್ಲಾಳನ ಕಾಲದಲ್ಲಿ ಹಳೇ ಅಲೂರಿನಲ್ಲಿ ೧೯ ಸಾಲುಗಳ ಶಿಲಾಶಾಸನವನ್ನು ದೇಶಿಯಾಚಾರಿಯ ಮಗ ನಾರಾಯಣಚಾರಿ ಬರೆದಿದ್ದಾನೆ.[೯] ಈ ಆಚಾರಿಗಳು ಶಾಸನವನ್ನು ಬರೆಯುವುದರ ಜೊತೆಗೆ ಶಿಲ್ಪಗಳನ್ನು ರೂಪಿಸುವ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಗುಂಬಳ್ಳಿಲ್ಲಿ ನಾಗತಿಮ್ಮಯ್ಯನ ಮಗ ಮಲ್ಲಯ್ಯನು ಕಲ್ಲಾಚಾರಿ ಎಂಬ ರೂವಾರಿಯಿಂದ ವಾಲಬ್ಬೆಯನ್ನು ನಿರ್ಮಿಸಿದ್ದಾನೆ.[೧೦] ಹೆಸರೇ ಸೂಚಿಸುವಂತೆ ಕಲ್ಲಾಚಾರಿ ಕಲ್ಕುಟಿಗೆ ಕೆಲಸವನ್ನು ನಿರ್ವಹಿಸುತ್ತಿದ್ದನೆಂದು ಊಹಿಸಬಹುದು. ೧೯ನೇ ಶತಮಾನದಲ್ಲಿ ಬಿಳಿಗಿರಿರಂಗನಬೆಟ್ಟದ ಗರುಡವಾಹನವನ್ನು ವೀರಾಚಾರಿಯ ಮಗ ನಂಜುಡಚಾರಿಯು ರೂಪಿಸಿದ್ದಾನೆ.[೧೧]

ವಿಶ್ವಕರ್ಮ ಜನಾಂಗದವರಂತೆ ಶಾಸನ ಕೊರೆಯುವ ಕೆಲಸವನ್ನು ಅದಿಕೃತವಾಗಿ ನಿರ್ವಹಿಸಬೇಕಾಗಿದ್ದವರು ಆ ಪ್ರದೇಶದ ಸೇನುಭೋವರು, ಗ್ರಾಮ ಲೆಕ್ಕಾಧಿಕಾರಿಗಳಾದ ಇವರು ಅರಸನ ಅಜ್ಞೆ, ದಾನ, ದತ್ತಿಗಳನ್ನು ಶಾಸನದಲ್ಲಿ ಬರೆದು ಅಥಾವ ಬರೆಯಿಸಿ ಪ್ರಜೆಗಳಿಗೆ ತಿಳಿಯುವಂತೆ, ಬಹುಕಾಲ ಉಳಿಯುವಂತೆ ನೋಡಿಕೊಳ್ಳಬೇಕಾಗಿತ್ತು. ಕ್ರಿ.ಶ. ೧೪೧೩ರಲ್ಲಿ ಮೂಡಲ ಅಗ್ರಹಾರದ ೭೮ ಸಾಲುಗಳ ಶಿಲಾಶಾಸನವನ್ನು ಸೇನುಭೋವ ಸಂಕಣ್ಣ, ಸಿದ್ದಣ್ಣರು ಬರೆದಿದ್ದಾರೆ.[೧೨] ೧ನೇ ದೇವರಾಯನ ಕಾಲದಲ್ಲಿ ಸಿಂಗನಲ್ಲೂರಿನಲ್ಲಿ ಸೇನುಭೋವನಾಗಿದ್ದ ರಾಯಪ್ಪ, ವೀರಣ್ಣ ೮೫ ಸಾಲುಗಳ ಶಿಲಾ ಶಾಸನಗಳನ್ನು ಕಂಡಿರಿಸಿ ಈ ಕಾರ್ಯಕ್ಕಾಗಿ ಹಳಿಹಿರಿಯೂರಿನಲ್ಲಿ ಗದ್ದೆ, ಬೆದ್ದಲು ತೋಟವನ್ನು ಪಡೆದುಕೊಂಡಿದ್ದಾರೆ.[೧೩] ಬರಹಗಾರ ರಾಯಪ್ಪನಿಗೆ ನಾಡ ಸೇನುಭೋವಿಗೆಯನ್ನು ಅಚಂದ್ರಾರ್ಕವಾಗಿ ನಡಸಿಕೊಂಡು ಹೋಗುವಂತೆ ಶಾಸನದಲ್ಲಿ ನಮೂದಿಸಿದೆ.

ರೂವಾರಿಗಳಲ್ಲಿ ಹನ್ನಿಬೋಜನ ಹೆಸರು ಕೆಂಪನಪುರ ಶಾಸನದಲ್ಲಿದೆ.[೧೪] ೨೦ ಸಾಲುಗಳ ಈ ಶಿಲಾಶಾಸನ ಹೊಯ್ಸಳ ದೊರೆ ೧ನೇ ನರಸಿಂಹ ಕಾಲದ್ದು. ಕನ್ನಡ ಭಾಷೆ, ಲಿಪಿಯಲ್ಲಿದ್ದು, ಕಲ್ಲೂರ ವಾದ್ದಲಗೋತ್ರದ ನಾರಣದೇವನ ಮಗ ಚಂದ್ರಶೇಖರ ಮಾರಾಯ ಭೂಮಿಯನ್ನು ಖರೀದಿಸಿದ ಕ್ರಯಪತ್ರದ ವಿವರವನ್ನೊಂದಿದೆ. ಚೋಳರ ಆಗಮನದೊಂದಿಗೆ ಈ ಪ್ರದೇಶ ತಮಿಳು ಬಾಷೆಯ ಪ್ರಭಾವಕ್ಕೊಳ್ಳಪಟ್ಟಿದ್ದು ಹೊಯ್ಸಳ ಕಾಲದಲ್ಲಿಯೂ ತಮಿಳು ಆಡಳಿತ ಭಾಷೆಯಾಗಿ ಮುಂದುವರೆದಿದೆ. ಈ ಕಾಲದಲ್ಲಿ ಬರೆಯಿಸಲ್ಪಟ್ಟ ಹೆಚ್ಚಿನ ಶಾಸನಗಳು ತಮಿಳು ಬಾಷೆ, ಲಿಪಿಯಲ್ಲಿಯೇ ಇವೆ. ಆದರೆ ಹನ್ನಿಬೋಜನ ಈ ಶಾಸನ ಕನ್ನಡ ಭಾಷೆ, ಲಿಪಿಯಲ್ಲಿದ್ದು ಆಡುಭಾಷೆಯಂತಿರದೆ ಕೆಲವು ಕಡೆ ಸಾಹಿತ್ಯದ ಸೊಗಡನ್ನು ಹೊಂದಿದೆ. ೧೧ನೇ ಶತಮಾನದಲ್ಲಿ ಎಡೂರಿನ ೨೪ ಸಾಲುಗಳ ಶಿಲಾಶಾಸನವನ್ನು ಮಲ್ಲೋಜನ ಮಗ ದೊಡ್ಡೋಜನು ಬರೆದಿದ್ದಾನೆ.[೧೫] ದೇವಲಿಂಗದೇವನು ಇಲ್ಲಿ ಕೆರೆಯ ನಿರ್ಮಾಣದ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿದ್ದರಿಂದ ಕೆರೆಯ ಕೆಳಗಿನ ೨೦೦ ಮಣ್ಣು ಭೂಮಿಯನ್ನು ಪಡೆದುಕೊಂಡ ವಿವರ ಶಾಸನದಲ್ಲಿದೆ. ಕ್ರಿ.ಶ. ೧೩೮೦ರ ಬುಕ್ಕರಾಯನ ಉಲ್ಲೇಖವಿರುವ ಹೊಮ್ಮದ ೨೬ ಸಾಲುಗಳ ಶಿಲಾಶಾಸನವನ್ನು ಗೋಪಣ್ಣನ್ನು ಕಂಡಿರಿಸಿದ್ದಾನೆ.[೧೬] ಶಾಸನದ ಕೊನೆಯಲ್ಲಿ ತನ್ನನ್ನು ಅಕ್ಷರದ ಗೋಪಣ್ಣನೆಂದು ಕರೆದುಕೊಂಡಿದ್ದಾನೆ. ಇದರಿಂದ ಗೋಪಣ್ಣನು ಶಾಸನವನ್ನು ಬರೆದವನು ಮಾತ್ರವೇ ಅಗಿದ್ದು, ಶಾಸನದ ಮೂಲ ಪಾಠವನ್ನು ಸಿದ್ದಪಡಿಸಿದವರು ಬಹುಶಃ ಬೇರೆಯವರೇ ಅಗಿರಬಹುದು. ಶಾಸನದಲ್ಲಿ ಪುಲ್ಲೂರ ಅಲಘಪೆರುಮಾಳರ ಉಲ್ಲೇಖವಿದೆ. ಇವರು ಚತುರ್ವೇದ ಪಂಡಿತರಾಗಿದ್ದು, ವ್ಯಾಕರಣ, ಛಂದಸ್ಸು ನಾನಾ ವಿಷಯಗಳಲ್ಲಿ ಪ್ರವೀಣರೆಂದು ಹೇಳಿದೆ. ಶಾಸನವು ಸ್ರಗ್ದರೆ, ಮತ್ತೆ ಭವೀಕ್ರೀಡಿತ, ಮಹಾಸ್ರಗ್ದರೆ, ಕಂದ, ಚಂಪಕಮಾಲಾ, ಉತ್ಪಲಮಾಲಾ, ಛಂದಸ್ಸಿನಲ್ಲಿರುವುದರಿಂದ ಅಳಘಪೆರುಮಾಳರೆ ಶಾಸನದ ಮೂಲಪಾಠವನ್ನು ಸಿದ್ದಪಡಿಸಿರಬಹುದು. ೧೦೮ ವೃತ್ತಿಯ ಮಹಾಜನರು ಹೊಮ್ಮದ ಮೂಲಸ್ತಾನೇಶ್ವರ ದೇವರ ಅಮೃತಪಡಿ ಪೂಜೆಗೆ ಭೂಮಿಯನ್ನು ದತ್ತಿ ನೀಡಿದ ಉಲ್ಲೇಖ ಶಾಸನದಲ್ಲಿದೆ.

ಹರದನಹಳ್ಳಿಯ ತಾಮ್ರ ಶಾಸನವು ೯೧ ಸಾಲುಗಳನ್ನು ಹೊಂದಿದ್ದು, ಕೃಷ್ಣದೀಕ್ಷಿತರು ಶಾಸನದ ಪಾಠವನ್ನು ರಚಿಸಿದ್ದಾರೆ.[೧೭] ತಮ್ಮನ್ನು ಕಾಶ್ಯಪಗೋತ್ರಕ್ಕೆ ಸೇರಿದವರೆಂದು ಹೇಳಿಕೊಂಡಿದ್ದಾರೆ. ಅರಕಲವಾಡಿಯ ೯೫ ಸಾಲುಗಳ ಶಿಲಾಶಾಸನವನ್ನು ರಂಗರಾಜಯ್ಯನೆಂಬ ರೂವಾರಿಯು ಕಂಡರಿಸಿದ್ದಾನೆ.[೧೮] ಯಳಂದೂರಿನ ಗೌರೀಶ್ವರ ದೇವಾಲಯದಲ್ಲಿರುವ ೯೫ ಸಾಲುಗಳ ಶಿಲಾಶಾಸನವನ್ನು ಬರೆದವನು ಬೊಮ್ಮಣ್ಣ ಪಂಡಿತ. ತನ್ನನ್ನು ವರತನಯಂ ರಸಿಕ ಪಂಡಿತನೆಂದು ಹೇಳಿಕೊಂಡಿದ್ದು ಸರಸಕವಿಯೆಂದು ಪ್ರಸಿದ್ದನಾಗಿದ್ದ ಸಾಸಲಯ್ಯನು ಶಾಸನದ ಪಾಠವನ್ನು ಸಿದ್ದಪಡಿಸಿದ್ದಾನೆ.[೧೯] ಈ ಶಾಸವು ಕನ್ನಡ ಭಾಷೆ ಮತ್ತು ಲಿಪಿಯಲ್ಲಿದೆ.

**ಅಡಿ ಟಿಪ್ಪಣಿಗಳು**

1. ಎಪಿಗ್ರಫಿಯ ಕರ್ನಾಟಿಕ ಸಂ. ೩, ಗುಂಡ್ಲುಪೇಟೆ, ಶಾಸನ ಸಂಖ್ಯೆ ೧೦೨, ಕೆಲಸೂರು ಕ್ರಿ.ಶ. ೧೨ನೇ ಶತಮಾನ, ಪುಟ ೭೭
2. ಅದೇ, ಶಾಸನಸಂಖ್ಯೆ ೧೪೭, ತ್ರಿಯಾಂಬಕಪುರ, ಕ್ರಿ.ಶ. ೧೪೪೩, ಪುಟ ೧೦೪
3. ಎ.ಕ.ಸಂ.೪, ಚಾಮರಾಜನಗರ, ಶಾ.ಸಂ ೧೨೨, ತೆಳನೂರು, ಕ್ರಿ.ಶ. ೧೧೬೯, ಪುಟ ೭೦
4. ಅದೇ, ಶಾ.ಸಂ. ೭೯, ಎಲ್ಲೂರು, ಕ್ರಿ.ಶ. ೯೭೧, ಪುಟ ೪೭
5. ಅದೇ, ಶಾ.ಸಂ. ೩೫೪, ಕೆರೆಹಳ್ಳಿ, ಕ್ರಿ.ಶ. ೯೦೪, ಪುಟ ೨೨೭
6. ಅದೇ, ಯಳಂದೂರು, ಶಾ.ಸಂ. ೯೭, ಅಗರ, ಕ್ರಿ.ಶ. ೧೧ನೇ ಶತಮಾನ, ಪುಟ ೩೨೪
7. ಹಳೆಗನ್ನಡ, ೨೦೧೩, ಎಸ್. ಶೆಟ್ಟರ್, ಅಭಿನವ ಪ್ರಕಾಶನ, ಬೆಂಗಳೂರು, ಪುಟ ೪೭
8. ಎ.ಕ.ಸಂ.೪, ಚಾಮರಾಜನಗರ, ಶಾ.ಸಂ. ೧೧೫, ಬಾಗಳಿ, ಕ್ರಿ.ಶ. ೧೦ನೇ ಶತಮಾನ ಪುಟ ೬೬
9. ಅದೇ, ಶಾ.ಸಂ ೧೮೭, ಹಳೇಆಲೂರು, ಕ್ರಿ.ಶ. ೧೨೦೭, ಪುಟ ೧೧೫
10. ಅದೇ, ಯಳಂದೂರು, ಶಾ.ನಂ.೧೮೬, ಗುಂಬಳ್ಳಿ, ಕ್ರಿ.ಶ.೧೦ನೆಯ ಶತಮಾನ, ಪುಟ ೩೮೨
11. ಅದೇ, ಶಾ.ಸಂ. ೧೯೭, ಬಿಳಿಗಿರಿರಂಗನಬೆಟ್ಟ, ಕ್ರಿ.ಶ. ೧೯ನೆಯ ಶತಮಾನ, ಪುಟ ೩೮೭
12. ಅದೇ, ಚಾಮರಾಜನಗರ, ಶಾ.ಸಂ. ೧೦೪, ಮೂಡಲ ಅಗ್ರಹಾರ, ಕ್ರಿ.ಶ. ೧೪೧೨, ಪುಟ ೫೩
13. ಅದೇ, ಕೊಳ್ಳೆಗಾಲ, ಶಾ.ಸಂ. ೫೬, ಸಿಂಗನಲ್ಲೂರು, ಕ್ರಿ.ಶ. ೧೪೦೩, ಕ್ರಿ.ಶ. ೪೩೪
14. ಅದೇ, ಚಾಮರಾಜನಗರ, ಶಾ.ಸಂ. ೧೪೩, ಕೆಂಪನಪುರ, ಕ್ರಿ.ಶ. ೧೧೬೯ ಪುಟ ೮೬
15. ಅದೇ, ಶಾ.ಸಂ. ೧೨೯, ಎಡೂರು, ಕ್ರಿ.ಶ. ೧೩೮೯, ಪುಟ ೭೫
16. ಅದೇ, ಶಾ.ಸಂ. ೧೪೮, ಹೊಮ್ಮ, ಕ್ರಿ.ಶ. ೧೩೮೦, ಪುಟ ೯೨
17. ಅದೇ, ಶಾ.ಸಂ. ೨೯೧, ಹರಪನಹಳ್ಳಿ, ಕ್ರಿ.ಶ. ೧೭೪೪, ಪುಟ ೧೮೦
18. ಅದೇ, ಚಾಮರಾಜನಗರ, ಶಾ.ಸಂ. ೩೦೧, ಅರಕಲವಾಡಿ, ಕ್ರಿ.ಶ. ೧೫೫೫, ಪುಟ ೨೭೪
19. ಅದೇ, ಯಳಂದೂರು, ಶಾ.ಸಂ. ೧, ಯಳಂದೂರು, ಕ್ರಿ.ಶ. ೧೬೫೪, ಪುಟ ೨೭೪